ನಡೆದು ಇದು ಕೊನೆಯ ಹಂತದಲ್ಲಿ ಇದೆ. ಆದುದರಿಂದ ಈ ಹಂತದಲ್ಲಿ ಮಾನ್ಯ ರಾಜಣ್ಣನವರು ಹೇಳಿದಹಾಗೆ ಪೊಲೀಸ್ ಇಲಾಖೆಯವರು ಮಾಡಿರುವಂತಹ ಕೆಲಸವನ್ನು ಪ್ರಶಂಸೆ ಮಾಡಿದ್ದಾರೆ. ಈಗ ಇದನ್ನು ಸಿ.ಬಿ.ಐ.ಗೆ ಕೊಡುವಂತಹ ಅವಶ್ಯಕತೆ ಇಲ್ಲ. ಎರಡನೆದಾಗಿ ಪರಿಹಾರ ಕೊಡುವಂತಹ ವಿಚಾರ. ಸರ್ಕಾರದ ಮುಂದೆ ಈ ರೀತಿ ಪರಿಹಾರ ಕೊಡತಕ್ಕ ಯಾವುದೇ ವಿಚಾರ ವಿಚಾರ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಗೃಹ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಬಹಳ ಗಂಭೀರವಾದಂತಹ ವಿಷಯ ಇದೆ. ಪೋಲೀಸ್‌ನವರು ತನಿಖೆ ಮಾಡಿದರೆ ಸತ್ಯಾಂಶ ಎಲ್ಲಾ ಹೊರ ಬೀಳುತ್ತದೆ ಎಂದು ಹೇಳುತ್ತಿದ್ದಾರೆ. ಇದು ಮಾನ್ಯ ಗೃಹ ಮಂತ್ರಿಯವರಿಗೆ ಬಿಟ್ಟ ವಿಷಯ. ಆದರೆ ನನ್ನ ಸ್ಪಷ್ಟ ಅಭಿಪ್ರಾಯ ಎಂದರೆ ಇದು ದೇಶ ಮತ್ತು ರಾಜ್ಯದ ಬಹಳ ಗಂಭೀರವಾದಂತಹ ವಿಷಯ ಮತ್ತು ವಿದೇಶಿಗಳ ಹಸ್ತಕ್ಷೇಪ ಇದೆ ಎಂದು ಎನ್ನತಕ್ಕದ್ದರ ಬಗ್ಗೆ ಗುಮಾನಿ ಇದೆ. ಆದ್ದರಿಂದ ಸದನದ ಸಮಿತಿಯನ್ನು ರಚನೆ ಮಾಡಿ ಇದರ ಎಲ್ಲಾ ವಿಷಯ ತನಿಖೆ ಮಾಡಬೇಕು. ಇದು ಸದನದ ಸಮಿತಿ ಮುಖಾಂತರವಷ್ಟೇ ಇದರ ಸತ್ಯಾಂಶ ಹೊರಬರುವುದಕ್ಕೆ ಸಾಧ್ಯ ಆಗುತ್ತದೆ. ಅದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಕ್ರಿಮಿನಲ್ ಕೇಸ್. ಇನ್‌ವೆಸ್ಟಿಗೇಷನ್ ಎಲ್ಲಾ ಆಗಿರತಕ್ಕದ್ದು. ಈಗ ಇದರ ಬಗ್ಗೆ ಸಮಿತಿಯ ಅವಶ್ಯತೆ ಇಲ್ಲ ಎನ್ನತಕ್ಕದ್ದು ನಮ್ಮ ಸ್ಪಷ್ಟವಾದ ನಿರ್ಧಾರ.

ಅಧ್ಯಕ್ಷರು : ಸನ್ಮಾನ್ಯ ವೈ. ರಾಮಕೃಷ್ಣ ಅವರೇ ನಿಮ್ಮ ಪ್ರಶ್ನೆ 5(333) ಸಂಬಂಧಪಟ್ಟಂತೆ ಮಾನ್ಯ ಗೃಹ ಮಂತ್ರಿಯವರು ಕಾಲಾವಕಾಶವನ್ನು ಕೇಳಿದ್ದಾರೆ. ಮಾಹಿತಿ ಎಲ್ಲಾ ಕಡೆಯಿಂದ ತರಿಸಬೇಕಾಗಿದೆ.

ಶ್ರೀ ವೈ. ರಾಮಕೃಷ್ಣ : ಇದು ಬಹಳ ಸುಲಭವಾದ ಪ್ರಶ್ನೆ. ನಾನು ಗವರ್ನರ್ ಅಡ್ರೆಸ್ ಮೇಲೆ ಭಾಷಣ ಮಾಡುವಾಗ ಅಳವಡಿಸಬೇಕಾಗುತ್ತದೆ, ಅದಕ್ಕೋಸ್ಕರವಾಗಿ ಮುಖ್ಯವಾಗಿ ಬೇಕಾಗಿತ್ತು ನಾಳೆ ಏನಾದಾರೂ ತರಿಸುವುದಕ್ಕೆ ಆಗುತ್ತದೆಯೇ? ಗವರ್ನರ್ ಭಾಷಣದ ಮೇಲೆ ಮಾತನಾಡುವಾಗ ಅಳವಡಿಸಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರವನ್ನು ಎಲ್ಲಾ ತಾಲ್ಲೂಕು ಮತ್ತು ಜಿಲ್ಲೆಯಿಂದ ತರಿಸಬೇಕಾಗಿರುವುದರಿಂದ ನಾನು ಒಂದು ದಿನದ ಸಮಯವನ್ನು ಕೇಳಿದ್ದೇನೆ. ಸದನದ ಸಮಯದ ಅನುಕೂಲಕ್ಕೆ ತಕ್ಕಂತೆ ನಾನು ಉತ್ತರ ಕೊಡಲಿಕ್ಕೆ ಸಿದ್ಧನಿದ್ದೇನೆ.

ಬೆಂಗಳೂರು ನಗರಕ್ಕೆ ಕಾವೇರಿ 4ನೇ ಹಂತದ ಯೋಜನೆಯನ್ನ್ನು ಕಾರ್ಯಗತ ಗೊಳಿಸುವುದು

54 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಕಾವೇರಿ 3ನೇ ಹಂತದ ಕಾರ್ಯ ಪೂರ್ಣಗೊಳಿಸಲಾಗಿದೆಯೆ;

ಆ) ಹಾಗಿಲ್ಲದಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು;

ಇ) ಕಾವೇರಿ 4ನೇ ಹಂತದ ಯೋಜನೆಗೆ 1994ರಲ್ಲಿ ಶಂಕು ಸ್ಥಾಪನೆ ಹಾಕಿರುವುದು ನಿಜವೆ;

ಈ) ಹಾಗಿದ್ದಲ್ಲಿ, 1993-95ನೇ (ಫೆಬ್ರವರಿ 1995ರವರೆಗೆ) ಅಯವ್ಯಯದಲ್ಲಿ ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು? ಹಾಗೂ ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಕಾವೇರಿ ನೀರು ಸರಬರಾಜು ಯೋಜನೆ 3ನೇ ಹಂತದ ಕಾಮಗಾರಿಯು ಬಹಳಷ್ಟು ಮುಗಿದಿದೆ. ಈಗಾಗಲೇ ಬೆಂಗಳೂರು ನಗರಕ್ಕೆ ಪ್ರತಿದಿನ 270 ದಶ ಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ನಗರದ ಒಳ ವಲಯಗಳಲ್ಲಿ ಕೆಲವು ಫೀಡರ್ ಮೈನ್‌ಗಳು ಹಾಗೂ ಕೊಳವೆ ನೀರಿನ ಸಂಸ್ಕರಣ ಘಟಕವನ್ನು ನಿರ್ಮಿಸುವ ಕೆಲಸವು ಪ್ರಗತಿಯಲ್ಲಿದೆ.

ಆ) 1996ರ ಅಂತ್ಯಕ್ಕೆ ಬಾಕಿ ಉಳಿದಿರುವ ಕೆಲಸಗಳನ್ನು ಪೂರ್ಣಗೊಳಿಸಲು ಯೋಚಿಸಲಾಗಿದೆ.

ಇ) ಹೌದು

ಈ) ಸರ್ಕಾರವು 200 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಈ ಮೊತ್ತದ ಪೈಕಿ 120 ಲಕ್ಷ ರೂಪಾಯಿಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಪಾವತಿಸಿದೆ.

ಈ ಯೋಜನೆಯನ್ನು 2000ನೇ ಇಸವಿಯಲ್ಲಿ ಪೂರ್ಣಗೊಳಿಸಲು ಯೋಚಿಸಲಾಗಿದೆ.

ಶ್ರೀ ಆರ್. ಕೃಷ್ಣಪ್ಪ : ಖಾಸಗಿಯವರಿಗೆ ಕೊಟ್ಟು, ನಾಲ್ಕನೆಯ ಹಂತದ ಯೋಜನೆ ಪೂರ್ಣ ಮಾಡುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು : ಖಾಸಗೀಯವರಿಗೆ ಕೊಟ್ಟು ನಾಲ್ಕನೆಯ ಯೋಜನೆ ಪೂರ್ಣ ಮಾಡುವುದಕ್ಕೆ ಆಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ನಾಲ್ಕನೇ ಯೋಜನೆ ಬಗ್ಗೆ ಅಡಿಗಲ್ಲು ಹಾಕಿರತಕ್ಕ ಕಾಲದಲ್ಲಿ 490 ಕೋಟಿ ರೂಪಾಯಿ ಅಂದಾಜು ಇತ್ತು; ಈಗ 540 ಕೋಟಿ ಆಗಿದೆ.

ಅಧ್ಯಕ್ಷರು : ಅವರ ಪ್ರಶ್ನೆ ಖಾಸಗಿಯವರಿಗೆ ಏನಾದರೂ ಅವಕಾಶ ಕೊಡುತ್ತೀರಾ ಎಂದು.

ಶ್ರೀ ಎಚ್.ಡಿ. ದೇವೇಗೌಡ : 4ನೇ ಹಂತದ ಯೋಜನೆ ಬಗ್ಗೆ ಈಗ ಲೇಟೆಸ್ಟ್ ಮಾಹಿತಿ ಪ್ರಕಾರ 540 ಕೋಟಿ ರೂಪಾಯಿ ಬೇಕಾಗಿದೆ. ಕೆಲಸ ಏನು ಮಾಡಿದ್ದಾರೆ ಎಂದರೆ ಈಗ 120 ಕೋಟಿ ರೂಪಾಯಿ ಲ್ಯಾಂಡ್ ಅಕ್ವಿಸಿಷನ್‌ಗೆ ಕೊಟ್ಟಿದೆ. ಓವರ್‌ಸೀಸ್ ಎಕನಾಮಿಕ್ ಕೋ-ಅಪರೇಷನ್ ಫಂಡ್‌ನಲ್ಲಿ ಹಿಂದಿನ ಸರ್ಕಾರ ಪ್ರಯತ್ನ ಮಾಡಿದ್ದಾರೆ. ಆದರೆ ಅದರ ಬಗ್ಗೆ ಇನ್ನೂ ಅಂತಿಮ ನಿರ್ಣಯ ಆಗಿಲ್ಲ. ಈಗ ಅಪ್ರೈಸಲ್ ಟೀಮ್‌ನವರು ಮುಂದಿನ ಮೇ ತಿಂಗಳಿನಲ್ಲಿ ಬರತಕ್ಕ ಮಾತನ್ನು ಹೇಳಿದ್ದಾರೆ. 11, 12 ಮತ್ತು 13ನೇ ಫೆಬ್ರವರಿಯಲ್ಲಿ ಆ ಓ.ಇ.ಸಿ.ಎಫ್.ನಿಂದ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಬಂದಿದ್ದು ಅವರು ಯೋಜನೆಯ ಸ್ಥಳ ಪರಿಶೀಲನೆ ಮಾಡಿ, ಇದರ ಬಗ್ಗೆ ವ್ಯಾಪಕವಾದ ತಾಂತ್ರಿಕವಾದ ಎಲ್ಲಾ ಮಾಹಿತಿಗಳನ್ನು ನೋಡಿದ ಮೇಲೆ ಅಪ್ರೈಸಲ್ ಟೀಮ್‌ನವರನ್ನು ಮೇ ತಿಂಗಳಲ್ಲಿ ಕಳಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಮಾತುಕತೆಯ ಹಂತದಲ್ಲಿ ಇದೆ. ಪ್ರೈವಟೈಸೇಷನ್ ಬಗ್ಗೆ ಹೇಳುವುದಾದರೆ ಕೆಲವರು ಮುಂಗೆ ಬಂದಿದ್ದಾರೆ. ಅದರ ಬಗ್ಗೆ ಸರ್ಕಾರ ಇನ್ನೂ ಅಂತಿಮ ನಿರ್ಣಯ ಮಾಡಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಮೂರು ಯೋಜನೆಗಳು ಮುಗಿದಿದ್ದಾವೆ. ವಿದ್ಯುತ್ ಮಂತ್ರಿಗಳು ಇಲ್ಲಿಯೇ ಇದ್ದಾರೆ. ನಾಲ್ಕನೇ ಯೋಜನೆ ಅಂದರೆ ಇದರ ಜೊತೆಯಲ್ಲಿ ನೀವು ಎಷ್ಟು ವಿದ್ಯುತ್ ಒದಗಿಸಬೇಕು ಎಂದು ಯೋಚನೆ ಮಾಡಿಕೊಂಡು ಮಾಡಬೇಕು. ಈಗ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶ ಮಾಡಬೇಕು ಎಂಬ ಪ್ರಸ್ತಾಪ ಇದೆ. ಈಗ ನಮ್ಮ ರಾಜ್ಯದಲ್ಲಿ ಹತ್ತಿರ ಹತ್ತಿರ 600 ಲಕ್ಷ ಯೂನಿಟ್ ಉತ್ಪನ್ನ ಇರಬೇಕು. ಇದಕ್ಕೆ ಬೇಕಾಗಿರುವುದು ಆರು ಲಕ್ಷ ಯೂನಿಟ್‌ಗೆ ಕೊಡುವುದಕ್ಕೆ ಆಂಧ್ರದವರು ಕೊಟ್ಟರೆ ನೀರು ಕುಡಿಯಿರಿ ಎಂದು ಹೇಳುತ್ತಿದ್ದೀರಿ. ಈಗ ಎಲೆಕ್ಟ್ರಿಸಿಟಿಗೆ ಏನು ಯೋಜನೆ ಮಾಡುತ್ತೀರಿ ಹಾಲಿ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಉತ್ಪನ್ನ, ಎಂದರೆ ನಾವು ಪರಾವಲಂಬಿಗಳು ಆಗದೇ ಉತ್ಪನ್ನ ಇರತಕ್ಕದ್ದು, ಆಂಧ್ರದವರು ಕೊಟ್ಟರೆ ಅಥವಾ ಬೆಂಗಳೂರಿನವರು ನೀರು ಕುಡಿಯಿರಿ ಇಲ್ಲದಿದ್ದರೆ ಕುಡಿಯಬೇಡಿ ಎನ್ನತಕ್ಕ ಮಾತನ್ನು ಆಡಬಾರದು. ಇದಕ್ಕೆ ನೀವು ಏನು ಯೋಜನೆ ಮಾಡಿದ್ದೀರಿ ದಯಮಾಡಿ ಹೇಳಿ.

ಶ್ರೀ ಎಚ್.ಡಿ. ದೇವೇಗೌಡ : ಪವರ್ ಒಂದು ಕಾಂಪೊನೆಂಟ್. ನೀರು ಸರಬರಾಜಿಗೆ ಸಂಬಂಧಪಟ್ಟಂತೆ, ಪವರ್ ಕಾಂಪೊನೆಂಟ್ ಏನು ಇದೆ, ಅದರ ಬಗ್ಗೆ ಕೆಳುವು ಮಧ್ಯೆ ಆತಂಕಗಳು ಏನು ಇವೆ. ಆ ವಿಷಯದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಮಾತನ್ನು ಹೇಳಿದ್ದೇವೆ. ಅದರ ಬಗ್ಗೆ ನಮ್ಮ ಸದರನ್ ಗ್ರಿಡ್‌ನಿಂದ ಬರತಕ್ಕ ಹಕ್ಕಿನ ಬಗ್ಗೆ ಯಾವ ದಾಕ್ಷಿಣ್ಯವೂ ಇಲ್ಲ, ನಮಗೆ ಬರಬೇಕಾದ ಹಕ್ಕು ಅದು ಬರಬೇಕು.

SRI H.N. NANJEGOWDA : This is essential service. Make your own arrangements. Do not depend on others.

ಶ್ರೀ ಎಚ್.ಡಿ. ದೇವೇಗೌಡ : ಈಗ ಇಂಟರ್‌ಸೆಷ್ಟ್ ಆಗಿ ಮಧ್ಯೆ ಕೆಲವು ಪ್ರಬ್ಲಮ್ ಆಯಿತು ಎನ್ನುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಿದ್ದೇನೆ. ಎರಡು ಮೂರು ದಿವಸದಿಂದ ಈ ಒಂದು ದಿಕ್ಕಿನಲ್ಲಿ ಸಾಕಷ್ಟು ಇಂಪ್ರೂವ್‌ಮೆಂಟ್ ಆಗಿದೆ. ಅದರ ಬಗ್ಗೆ ನಾನು ಮೊನ್ನೆಯ ದಿವಸ ಆಚೆ ಮೊನ್ನೆ, ಎರಡು ಮೂರು ದಿವಸ ಕ್ರಮ ತೆಗೆದುಕೊಂಡ ಮೇಲೆ ಇಷ್ಟೆಲ್ಲಾ ಇಂಪ್ರೂವ್‌ಮೆಂಟ್ ಆಗಿದೆ. 270 ಪಂಪ್ ಸಾಮರ್ಥ್ಯದ ಬಗ್ಗೆ ಹೇಳಿದ್ದೇನೆ. ಅಷ್ಟನ್ನೂ ಈಗ ಪಂಪ್ ಮಾಡುತ್ತಿದ್ದೇವೆ. ಪೊಜಿಷನ್‌ನಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ಮಾನ್ಯ ನಂಜೇಗೌಡರು ಹೇಳಿದ ಹಾಗೆ ಶರಾವತಿ ಯೋಜನೆಯ ಬಗ್ಗೆ ಸಪರೇಟ್ ಒಂದು ಲೈನ್ ಹಾಕಿ ಎಂಬ ಮಾತನ್ನು ಹೇಳಿದ್ದಾರೆ. ತಮ್ಮಲ್ಲಿ ನಾನು ಭರವಸೆ ಕೊಡುತ್ತೇನೆ. ಈ ತಿಂಗಳು 31ನೆಯ ತಾರೀಖಿನೊಳಗೆ ನಾವು ಯಾವುದೇ ಬಾಧೆ ಇಲ್ಲದೇ, ನಮ್ಮದೇ ಆದಂತಹ ವಿದ್ಯುತ್ತನ್ನು ಸರಬರಾಜು ಮಾಡುವುದರ ಮುಖೇನ ಬೆಂಗಳೂರು ನಗರಕ್ಕೆ ಮುಂದೆ ಯಾವುದೇ ರೀತಿಯಲ್ಲಿ ಆತಂಕ ಬರದೇ ಇರತಕ್ಕ ರೀತಿಯಲ್ಲಿ ಜವಾಬ್ದಾರಿ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಆಂಧ್ರದ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ, ಕುಡಿಯುವ ನೀರಿನ ಬಗ್ಗೆ ಎರಡು ಪತ್ರಿಕೆಯಲ್ಲಿ ಬಂದಿದೆ, ನಾನು ಓದಿದ್ದೇನೆ. ವಿದ್ಯುತ್ತಿನ ಬಗ್ಗೆ ತಾನು ಹೆಚ್ಚಿನ ವಿದ್ಯುತ್ ಬೇಕು ಎಂದು ಹೇಳಿ ಪತ್ರ ಆಂಧ್ರದ ಮುಖ್ಯ ಮಂತ್ರಿಗಳಿಗೆ ಬರೆದಿರುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಅದು ಬರೆದಿರುವುದು ನಿಜವೇ? ಮತ್ತೆ ಪತ್ರಿಕೆಯಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸಪ್ಲೈ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ನೀವು ಮಾಡತಕ್ಕ ವ್ಯವಸ್ಥೆ ಮಾಡಿದ್ದೀರಾ? ಈಗ ಅತ್ಯಂತ ಘೋರ ಪರಿಣಾಮ ನಡೆದಿದೆ. ಬೆಂಗಳೂರಿನ ನೀರು

ಸರಬರಾಜಿಗೆ ಸಂಬಂಧಪಟ್ಟಂತೆ ಬೆಳಿಗ್ಗೆ ನಾನು ತಮ್ಮನ್ನು ಭೇಟಿ ಮಾಡಿ ಈ ಬಗ್ಗೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಬಂದಿದ್ದೆ. ಅತ್ಯಂತ ಭೀಕರವಾದ ಪರಿಸ್ಥಿತಿ ಬೆಂಗಳೂರು ನಗರದಲ್ಲಿ ಇದೆ, ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಾರೆಯೇ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನೀರು ಸರಬರಾಜು ಬಗ್ಗೆ ಸಮರೋಪಾದಿ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಚ್.ಡಿ. ದೇವೇಗೌಡ : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ಎಸ್.ಟಿ. ರಾಮರಾವ್‌ಗೆ ಪತ್ರ ಬರೆದು ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುವುದಕ್ಕೆ ಹೋಗಿಲ್ಲ, ತುಂಗಭದ್ರ ಬಗ್ಗೆ ಬೇರೆ ಬೇರೆ ಯೋಜನೆ ಬಗ್ಗೆ ಹೇಳಬೇಕಾಗುತ್ತದೆ, ಮುಂದೆ ಬರುತ್ತೇನೆ. ಇದರಲ್ಲಿ ನೇರವಾಗಿ ಕೇಂದ್ರ ಸರ್ಕಾರದ ಹೊಣೆ ಇದೆ. ಕೇಂದ್ರ ಸರ್ಕಾರದ ಎನರ್ಜಿ ಮಿನಿಸ್ಟರ್ ಮತ್ತು ಕೇಂದ್ರ ಸರ್ಕಾರದ ಹೊಣೆ ಇದೆ. ಕೇಂದ್ರ ಸರ್ಕಾರದ ಎನರ್ಜಿ ಮಿನಿಸ್ಟರ್ ಮತ್ತು ಕೇಂದ್ರ ಸರ್ಕಾರ ಇದಕ್ಕೆ ಹೊಣೆ. ನಮ್ಮ ಪಾಲಿನ ವಿದ್ಯುತ್ ಸರಬರಾಜು ಆಗತಕ್ಕದ್ದಕ್ಕೆ ನೇರವಾಗಿ ಕೇಂದ್ರ ಸರ್ಕಾರ ತನ್ನ ಕರ್ತವ್ಯ ಮಾಡಬೇಕು. ನಾವು ಹೋಗಿ ಅವರನ್ನು ಭೇಟಿ ಮಾಡಿ ವಿಷಯವನ್ನು ಮನವರಿಕೆ ಮಾಡಿದ ಮೇಲೆ ಕೇಂದ್ರ ಸರ್ಕಾರದವರು ಒಂದು ಸೂಚನೆ ಕೊಟ್ಟಿದ್ದಾರೆ. ಒಬ್ಬ ಜಾಯಿಂಟ್ ಸೆಕ್ರೆಟರಿ ಶ್ರೀ ಅಬ್ರಹಾಮ್ ಎನ್ನುವವರಿಗೆ ಜವಾಬ್ದಾರಿಯನ್ನು ಕೊಟ್ಟು ಪ್ರತಿ ದಿವಸವೂ ನೀವು ಮಾನಿಟರ್ ಮಾಡಬೇಕು, ಎಷ್ಟು ಪವರ್ ಹೋಯಿತು, ಇದರಲ್ಲಿ ಯಾವುದೇ ಕಾರಣದಿಂದ ಆತಂಕ ಬರಕೂಡದು ಎಂದು ಹೇಳಿ ಅವರು ಸ್ಪೆಸಿಫಿಕ್ ಡೈರೆಕ್ಷನ್ ಕೊಟ್ಟು ಕೇಂದ್ರ ಸರ್ಕಾರ ಕೋಆಪರೇಟ್ ಮಾಡಿದ್ದಾರೆ. ಮುಂದೆ ನಿಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. 31ನೇ ತಾರೀಖಿನೊಳಗೆ ನಮಗೆ ಬಂದಿದ್ದನ್ನು ಬೇರೆಯುವುದಕ್ಕೆ ಉಪಯೋಗಿಸಿಕೊಳ್ಳೋಣ ಮುಂದೆ ಬೆಂಗಳೂರಿಗೆ ಈ ತರಹ ಆತಂಕ ಬರದೇ ಇರತಕ್ಕ ಪರಿಸ್ಥಿತಿ ನೋಡಿಕೊಳ್ಳುವುದಕ್ಕೆ ಅಗತ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆ, ಮಾರ್ಚ್ 31ರೊಳಗೆ.

ಮುಖ್ಯ ಮಂತ್ರಿಗಳ ವಿದೇಶ ಪ್ರವಾಸ

332 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಖ್ಯಮಂತ್ರಿಗಳು ವಿದೇಶದಲ್ಲಿನ ಯಾವ ಯಾವ ನಗರಗಳಿಗೆ ಎಂದು ಭೇಟಿ ಕೊಟ್ಟಿರುತ್ತಾರೆ?*

ಆ) *ಈ ಪ್ರವಾಸಕ್ಕೆ ತಗುಲಿದ ವೆಚ್ಚ ಎಷ್ಟು?*

ಇ) *ಪ್ರವಾಸ ಕಾಲದಲ್ಲಿ ರಾಜ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಅದರ ಪ್ರಗತಿ ಯಾವ ಹಂತದಲ್ಲಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು)

ಅ) ಮುಖ್ಯ ಮಂತ್ರಿಯವರು ಸ್ವಿಡ್ಜರ್ಲೆಂಡ್‌ನ ಡಾವೋಸ್‌ಗೆ ವರ್ಲ್ಡ್ ಎಕನಾಮಿಕ್ಸ್ ಫೋರಂನ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ದಿನಾಂಕ 22 ರಿಂದ 31ನೇ ಜನವರಿ